ದಿನಾಂಕ: 08.01.2019 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ನಡೆದ ವಿಡೀಯೊ ಸಂವಾದದ ಪ್ರಗತಿ ಪರಿಶೀಲನಾ ನಡವಳಿಗಳು.

ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರಿಗೆ ಇಲಾಖಾ ಪರವಾಗಿ ಸ್ವಾಗತ ಕೋರಿದರು. ಮಾನ್ಯ ಸಚಿವರು ವಿಷಯಸೂಚಿಯನುಸಾರ ಪರಿಶೀಲನೆ ನಡೆಸಿ ಕೊಡಲು ಮನವಿ ಮಾಡಿದರು.

ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಮೊದಲಿಗೆ ಸಭೆಯನ್ನುದ್ದೇಶಿಸಿ ಮಾತನಾಡಿ, ಕಳೆದ ಸಭೆಯಲ್ಲಿ ಕೈಗೊಂಡ ನಿರ್ಣಯಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬಾರದಿರುವುದರ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈ ವಿಡೀಯೊ ಸಂವಾದ ಕಾರ್ಯಕ್ರಮವನ್ನು ಗಂಭೀರವಾಗಿ ಪರಿಗಣಿಸಿದ್ದು ಮೈಸೂರಿನಲ್ಲಿ ದಿನಾಂಕ 22/01/2019 ರಂದು, ಇಂತಹುದೇ ಪರಿಸ್ಥಿತಿ ಕಂಡುಬಂದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ವಿಷಯಸೂಚಿ ಅನುಸಾರ ಎಲ್ಲಾ ಅಂಶಗಳ ಬಗ್ಗೆ ಜಿಲ್ಲಾವಾರು ಕೂಲಂಕುಷ ಪರಿಶೀಲನೆ ನಡೆಸಿ ಈ ಕೆಳಕಂಡ ಸೂಚನೆಗಳನ್ನು ನೀಡಿದರು.

ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ :-

- ರೂ. 5 ಲಕ್ಷಕ್ಕಿಂತ ಕಡಿಮೆ ಅಂದಾಜು ಮೊತ್ತ ಹೊಂದಿರುವ ಹಾಗೂ ರೂ. 5.00 ಲಕ್ಷ ಕ್ಕಿಂತ ಕಡಿಮೆ ಮೊತ್ತದ ಕಾಮಗಾರಿಗಳ ಕ್ರಿಯಾ ಯೋಜನೆ/ಕಾರ್ಯಾದೇಶ ನೀಡುವ ಕುರಿತು.

1. ಈ ಹಿಂದೆ ದಿ: 28.11.2018 ರಂದು ನಡೆದ ಸಭೆಯಲ್ಲಿ 2018-19 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಡಿ ಅಂದಾಜು ಮೊತ್ತ ರೂ. 5.00 ಲಕ್ಷಕ್ಕಿಂತ ಕಡಿಮೆಯಿರುವ ಕಾಮಗಾರಿಗಳಿಗೆ ನಿಯಮಾನುಸಾರ ಕ್ರಿಯಾ ಯೋಜನೆ ತಯಾರಿಸಿ ತುರ್ತು ಕಾಮಗಾರಿಗಳ ಅನುಷ್ಠಾನಕ್ಕೆ ಕಾರ್ಯಾದೇಶವನ್ನು ನೀಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕಟ್ಟುನಿಟ್ಟಿನ ಆದೇಶ ನೀಡಲಾಗಿದ್ದರೂ, ಈವರೆವಿಗೂ ಒಟ್ಟು 29022 ಕಾಮಗಾರಿಗಳ ಪೈಕಿ ಇನ್ನು 9422 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಬಾಕಿಯಿರುವುದು ಆಯಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳ ಕಾರ್ಯ ವೈಫಲ್ಯತೆಯನ್ನು ತೋರಿಸುತ್ತಿದೆ. ಇನ್ನಷ್ಟು ಮತ್ತಷ್ಟು

ಕಾಲಾವಕಾಶವನ್ನು ಕೇಳುವ ಚಾಳಿಯನ್ನು ಕೈ ಬಿಟ್ಟು, 15 ಜನವರಿ 2019 ರೊಳಗೆ ಎಲ್ಲಾ ಬಾಕಿ ಕಾಮಗಾರಿಗಳ ಕ್ರಿಯಾ ಯೋಜನೆಗಳ ಅನುಮೋದನೆ ಪ್ರಕ್ರಿಯೆ ಮುಕ್ತಾಯಗೊಳಿಸಿ ಕಾರ್ಯಾದೇಶ ನೀಡುವುದು.

2. ರೂ. 5.00 ಲಕ್ಷಕ್ಕಿಂತ ಹೆಚ್ಚಿನ ಅಂದಾಜು ಮೊತ್ತವುಳ್ಳ ಬಾಕಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ 25 ಜನವರಿ 2019 ರೊಳಗೆ ಕಾರ್ಯಾದೇಶ ನೀಡುವುದು.

3. ಬದಲೀ ಕಾಮಗಾರಿಗಳಿಗೆ ಅವಕಾಶವಿರುವುದಿಲ್ಲ ಎಂದು ತಿಳಿಸುತ್ತಾ ಅವಶ್ಯಕತೆ ಇಲ್ಲದಿರುವ ಕಡೆ ಆಯಾ ಕ್ಷೇತ್ರದ ಚುನಾಯಿತ ಜನ ಪ್ರತಿನಿಧಿಗಳಿಂದ ಪತ್ರ ಪಡೆದು ಕಾಮಗಾರಿಗಳನ್ನು ಹಿಂಪಡೆಯುವ ಬಗ್ಗೆ ಕ್ರಮ ಕೈಗೊಳ್ಳುವುದು. ಹೆಚ್ಚಿನ ಕಾಲಾವಕಾಶ ಕೇಳುವ ಪರಿಪಾಟವನ್ನು ಬಿಟ್ಟು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು ವೈಯಕ್ತಿಕವಾಗಿ ತೊಡಗಿಸಿಕೊಂಡು ಪ್ರಗತಿ ಸಾಧಿಸಲು ಸೂಚಿಸಲಾಯಿತು.

**<u>ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಅನುಷ್ಠಾನದ ಪ್ರಗತಿ ಕುರಿತು:-</u>**

4. ಶಿವಮೊಗ್ಗ, ಕೊಡಗು, ರಾಮನಗರ ಜಿಲ್ಲೆಗಳಲ್ಲಿ ಡಿಸೆಂಬರ್ 18 ರ ಅಂತ್ಯಕ್ಕೆ ಶೇ.20ಕ್ಕಿಂತ ಕಡಿಮೆ ಇದ್ದು, ಉತ್ತರ ಕನ್ನಡ, ಬಳ್ಳಾರಿ, ಕಲಬುರ್ಗಿ, ತುಮಕೂರು, ಚಿಕ್ಕಬಳ್ಳಾಪುರ, ರಾಯಚೂರು ಜಿಲ್ಲೆಗಳಲ್ಲಿ ಪ್ರಗತಿಯು ಶೇ.30 ಕ್ಕಿಂತ ಕಡಿಮೆ ಇರುತ್ತದೆ. ಬೀದರ್, ಚಿಕ್ಕಮಗಳೂರು, ಯಾದಗಿರಿ, ಉಡುಪಿ, ಬೆಂಗಳೂರು ನಗರ, ಬಿಜಾಪುರ, ಚಿತ್ರದುರ್ಗ, ಬಾಗಲಕೋಟೆ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಡಿಸೆಂಬರ್ 2018 ರ ಅಂತ್ಯದ ಪ್ರಗತಿಯು ಶೇ.50 ಕ್ಕಿಂತಲೂ ಕಡಿಮೆ ಇರುವುದನ್ನು ಗಮನಿಸಿ, ಮುಂದುವರೆದ ಕಾಮಗಾರಿಗಳಿದ್ದು ಬಿಲ್ ಪಾವತಿಯಾಗದಿರುವ ಬಗ್ಗೆ ಮಾನ್ಯ ಸಚಿವರು ತೀವ್ರವಾಗಿ ಆಕ್ಷೇಪಿಸುತ್ತಾ, ಆದ್ಯತೆ ಮೇರೆಗೆ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಲಾಯಿತು.

5. ಆರ್ಥಿಕ ಸಾಧನೆಯು ಭೌತಿಕ ಸಾಧನೆಗೆ ಹೊಂದಾಣಿಕೆ ಇಲ್ಲದಿರುವುದನ್ನು ಗಮನಿಸಿ ಆರ್ಥಿಕ ಸಾಧನೆಯನ್ನು ಹೆಚ್ಚುಗೊಳಿಸಲು ಕ್ರಮವಹಿಸುವುದು.

6. ಅನುದಾನ ಲಭ್ಯತೆ ಇದ್ದರೂ ಆರ್ಥಿಕ ಪ್ರಗತಿ ನಿರಾಶಾದಾಯಕವಾಗಿದ್ದು, ಎಲ್ಲಾ ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗಗಳ ಕಾರ್ಯಪಾಲಕ ಇಂಜಿನೀಯರುಗಳ ಸಭೆ ಕರೆದು ಪ್ರಗತಿ ಪರಿಶೀಲನೆ ನಡೆಸಲು ಮುಖ್ಯ ಇಂಜಿನೀಯರ್

ಮತ್ತು ಆಯುಕ್ತರು ಗ್ರಾಮೀಣ ಕುಡಿಯುವ ನೀರು ಸರಬರಾಜು, ಕ್ರಮ ವಹಿಸಲು ನಿರ್ದೇಶನ ನೀಡಲಾಯಿತು.

Task Force ಕಾಮಗಾರಿಗಳು:-

7. ಈವರೆವಿಗೂ ಬರಪೀಡಿತ ಎಂದು ಘೋಷಿಸಲಾದ ಎಲ್ಲಾ ತಾಲ್ಲೂಕುಗಳಿಗೂ ಒಟ್ಟಾರೆ ರೂ. 4400.00 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಿದ್ದು, ಡಿಸೆಂಬರ್ 2018 ರ ಅಂತ್ಯಕ್ಕೆ ಒಟ್ಟು ವೆಚ್ಚ ಕೇವಲ ರೂ. 571.74 ಲಕ್ಷಗಳಾಗಿರುವುದನ್ನು ಸಭೆಯು ಗಮನಿಸಿ ಬರಪೀಡಿತ ತಾಲ್ಲೂಕುಗಳಿಗೆ ನೀಡಿರುವ ಅನುದಾನವನ್ನು ಸಹಾ ವೆಚ್ಚ ಮಾಡದಿರುವುದು ಅಸಮಾದಾನಕರ. ಬರಪೀಡಿತ ತಾಲ್ಲೂಕುಗಳಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಇರುವ ಕಡೆ ಟ್ಯಾಂಕರ್‌ಗಳ ಸೇವೆ ಹಾಗೂ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು, ಕುಡಿಯುವ ನೀರಿನ ಸಮಸ್ಯೆ ಪರಿಹರಿಸಬಹುದಾಗಿದ್ದು, ಜಿಲ್ಲಾಡಳಿತದಿಂದ ವೆಚ್ಚವನ್ನು ಭರಿಸಲು ಕ್ರಮವಹಿಸುವುದು.

ಶುದ್ಧ ಕುಡಿಯುವ ನೀರಿನ ಘಟಕಗಳು:-

8. ಶುದ್ಧ ಕುಡಿಯುವ ನೀರಿನ ಘಟಕಗಳ ನಿರ್ವಹಣೆಯ ಒಪ್ಪಂದವು ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮಕ್ಕೆ **31 ಮಾರ್ಚ್ 2019** ರವರೆಗೂ ಮುಂದುವರೆದಿದ್ದು ಶುದ್ಧ ಕುಡಿಯುವ ನೀರಿನ ಘಟಕಗಳ ದುರಸ್ಥಿಗೆ ಕ್ರಮವಹಿಸಲು ಸೂಚಿಸಲಾಯಿತು.
9. ತುಮಕೂರು, ಶಿವಮೊಗ್ಗ, ರಾಮನಗರ, ರಾಯಚೂರು, ಮೈಸೂರು, ಕೊಪ್ಪಳ, ಬೀದರ್, ಬೆಳಗಾವಿ, ಚಿತ್ರದುರ್ಗ ಜಿಲ್ಲೆಗಳಲ್ಲಿ 100 ಕ್ಕಿಂತಲೂ ಹಚ್ಚು ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲದಿರುವುದನ್ನು ಸಭೆಯು ಗಮನಿಸಿ 31 ಜನವರಿ 2019ರ ಅಂತ್ಯದೊಳಗೆ ದುರಸ್ಥಿಗೊಳಿಸಲು ಕ್ರಮಕೈಗೊಳ್ಳಬೇಕು. ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಭಾಗಗಳ ಕಾರ್ಯಪಾಲಕ ಇಂಜಿನೀಯರುಗಳೊಂದಿಗೆ ಸಭೆ ನಡೆಸಿ ಸೂಕ್ತ ಕ್ರಮ ವಹಿಸುವುದು.

ಬಹುಗ್ರಾಮ ಕುಡಿಯುವ ನೀರಿನ ಯೋಜನೆ:-

10. 2018-19 ರ ಸಾಲಿನಲ್ಲಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಒಟ್ಟು 109 ಕಾಮಗಾರಿಗಳ ಪೈಕಿ ಈ ವರೆವಿಗೂ ಕೇವಲ 8 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು ಇನ್ನು 101 ಕಾಮಗಾರಿಗಳು ಬಾಕಿ ಇರುತ್ತವೆ. ಮೈಸೂರು (8), ಬಿಜಾಪುರ (8), ರಾಯಚೂರು (8), ದಾವಣಗೆರೆ (8), ಬಳ್ಳಾರಿ (6) ಹೀಗೆ ಬಹುತೇಕ

ಜಿಲ್ಲೆಗಳಲ್ಲಿ ಬಾಕಿ ಉಳಿದಿದ್ದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಸದರಿ ಯೋಜನೆಯ ಅನುಷ್ಠಾನ ಕುರಿತು ಪರಿಶೀಲನಾ ಸಭೆ ನಡೆಸಿ ಮಾರ್ಚ್ 2019 ರೊಳಗೆ ಪ್ರಗತಿ ಸಾಧಿಸಲು ಸೂಚಿಸಲಾಯಿತು.

(ಕ್ರಮ: ಆಯುಕ್ತರು, ಗ್ರಾನೀಸ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು)

DSS ತಂತ್ರಾಂಶದಲ್ಲಿ ಪ್ರಗತಿ ವಿವರ:-

11. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜಿಲ್ಲಾವಲಯ ಲಿಂಕ್ ಡಾಕ್ಯುಮೆಂಟ್ ಯೋಜನೆಗಳ ಪ್ರಗತಿ ವಿವರಗಳನ್ನು ಸಮರ್ಪಕವಾಗಿ ಇಂಧೀಕರಿಸದೆ ಟಿ.ಎನ್.ಎಂ.ಸಿ ವೆಚ್ಚ ಹಾಗೂ ಡಿ.ಎಸ್.ಎಸ್ ವೆಚ್ಚದಲ್ಲಿ ವ್ಯತ್ಯಾಸ ಕಂಡುಬರುತ್ತಿರುವುದರ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಈ ಕುರಿತು ವೈಯಕ್ತಿಕ ಗಮನ ಹರಿಸಿ ಸದರಿ ತಂತ್ರಾಂಶದಲ್ಲಿ RDPR ಜಿಲ್ಲಾವಲಯ ಕಾರ್ಯಕ್ರಮಗಳ ಪ್ರಗತಿ ವಿವರಗಳನ್ನು ಸಮರ್ಪಕವಾಗಿ ಇಂಧೀಕರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದರು.

(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು ಹಾಗೂ ನಿರ್ದೇಶಕರು PMI)

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-

12. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂ. 2.00 ಕೋಟಿಗಿಂತ ಹೆಚ್ಚು ವೆಚ್ಚ ಭರಿಸಿರುವ ಗ್ರಾಮ ಪಂಚಾಯಿತಿಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಖುದ್ದು ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ವರದಿ ನೀಡಲು ಸೂಚಿಸಲಾಯಿತು.

ಕ್ರಮ: (ಆಯುಕ್ತರು, ನರೇಗಾ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು)

ಪಂಚಾಯತ್ ರಾಜ್ ವಿಷಯಗಳು:-

14ನೇ ಹಣಕಾಸು ಯೋಜನೆ:

13. ರಾಜ್ಯದಲ್ಲಿ ತೀವ್ರ ಬರಗಾಲವಿರುವ ಕಾರಣ 14 ನೇ ಹಣಕಾಸು ಆಯೋಗದ ಯೋಜನೆ ಅನುದಾನದ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಿ ಕುಡಿಯುವ ನೀರಿನ ಕಾಮಗಾರಿಗಳಿಗೆ ಹೆಚ್ಚಿನ ಪ್ರಮಾಣದ ಅನುದಾನವನ್ನು ಬಳಸಿಕೊಳ್ಳಲು ಅನುವಾಗುವಂತೆ ಕ್ರಮವಹಿಸಲು ಸೂಚಿಸಿದರು. ಹೆಚ್ಚಿನ ಪ್ರಗತಿ ಸಾಧಿಸಲು ಹಾಗೂ ಪ್ರಗತಿ ವಿವರಗಳನ್ನು ದಾಖಲಿಸಿ, ಹಣಬಳಕೆ ಪ್ರಮಾಣ ಪತ್ರ ಸಲ್ಲಿಸಲು ಮತ್ತು Performance Grants ಪ್ರಸ್ತಾಪಗಳನ್ನು ತಕ್ಷಣ ಸಲ್ಲಿಸಲು ಸೂಚಿಸಲಾಯಿತು.

14. GPDP ಯಡಿ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಗಳ ವಿವರಗಳನ್ನು Plan Plus ಹಾಗೂ Priya Soft ತಂತ್ರಾಂಶದಲ್ಲಿ ದಾಖಲಿಸಲು ಹಾಗೂ ಗ್ರಾಮ ಪಂಚಾಯಿತಿ ಆಸ್ತಿಗಳನ್ನು Geo Tagging ಮಾಡಲು ಸೂಚಿಸಲಾಯಿತು.

    **(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು ಹಾಗೂ ನಿರ್ದೇಶಕರು PR I & PR II)**

15. NABARD RIDF ಯೋಜನೆಯಡಿ ಸಂಬಂಧಿಸಿದ ಕಾರ್ಯಪಾಲಕ ಇಂಜಿನೀಯರುಗಳ ಸಭೆ ನಡೆಸಿ, NABARD ಸಾಮಾನ್ಯ, NABARD SDP ಹಾಗೂ NABARD ಕೆರೆಗಳು ಯೋಜನೆಗಳ ಬಾಕಿ ಬಿಲ್‌ಗಳನ್ನು ಪಾವತಿಸಲು ಹಾಗೂ ಬಾಕಿ ಇರುವ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ತಕ್ಷಣ ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

    **(ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾ ಅಧಿಕಾರಿಗಳು ಹಾಗೂ ನಿರ್ದೇಶಕರು: ಗ್ರಾಮ ವಿಕಾಸ, ಮುಖ್ಯ ಎಂಜಿನೀಯರ್: ಪಂಚಾಯತ್ ರಾಜ್ ಎಂಜಿನೀಯರಿಂಗ್ ಇಲಾಖೆ)**

16. ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯಡಿ ಸಂಬಂಧಿಸಿದ ಕಾರ್ಯಪಾಲಕ ಇಂಜಿನೀಯರುಗಳ ಸಭೆ ನಡೆಸಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಲಾಯಿತು.

    (ಕ್ರಮ: ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ನಿರ್ದೇಶಕರು: ಗ್ರಾಮ ವಿಕಾಸ, ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು: KRRDA)

ಕಳೆದ ನಾಲ್ಕೈದು ತಿಂಗಳಿಂದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಗಳೊಂದಿಗೆ ಹಲವಾರು ಸಭೆಗಳನ್ನು ನಡೆಸಿ ಆದ್ಯತೆಯ ಮೇರೆಗೆ ವೈಯಕ್ತಿಕ ಗಮನ ಹರಿಸಿ ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜವಾಬ್ದಾರಿಯಿಂದ ಮಾನ್ಯ ಸಚಿವರು, ಕಳಕಳಿಯಿಂದ ನೀಡಿದ ಸೂಚನೆಗಳನ್ನು ಪಾಲಿಸಲು ನಿರ್ದೇಶಿಸಿದರು. ಬರಗಾಲದಂತಹ ಗಂಭೀರ ಪರಿಸ್ತಿತಿಯನ್ನು ರಾಜ್ಯ ಎದುರಿಸುತ್ತಿದ್ದು ಎಲ್ಲರೂ ಜಾಗ್ರತೆಯಿಂದ ಕೆಲಸ ಮಾಡಲು ಹಾಗೂ ಮತ್ತೆ ಮತ್ತೆ ಕಾಲಾವಕಾಶ ಕೇಳುವ ಚಾಳಿಯನ್ನು ಮುಂದುವರಿಸದೆ ದಿನಾಂಕ 22-01-2019 ರಂದು ನಿಗದಿಪಡಿಸಿರುವ ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ವೇಳೆಗೆ ಪ್ರಶಂಸನೀಯ ಪ್ರಗತಿ ಸಾಧಿಸಲು ಸಚಿವರು ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳಡಿ ಅಗತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸಂಬಂಭಪಟ್ಟ ಆಯುಕ್ತರು/ನಿರ್ದೇಶಕರಿಗೆ ನಡವಳಿ ತಲುಪಿದ ಒಂದು ವಾರದೊಳಗೆ ಸಲ್ಲಿಸಲು ಸೂಚಿಸಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಕೃಷ್ಣ ಬೈರೇಗೌಡ)
ಸಚಿವರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕೃಷ್ಣ ಬೈರೇಗೌಡ
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್
ಸಚಿವರು

ಸಂಖ್ಯೆ: ಗ್ರಾಅಪ/109/ಯೋಉಮಾ/2018 ದಿನಾಂಕ:14.01.2019

ಇವರಿಗೆ:

1. ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಆಯುಕ್ತರು, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ.
3. ಆಯುಕ್ತರು, ಕ.ಗ್ರಾ.ನೀ.ಸ. & ನೈರ್ಮಲ್ಯ ಇಲಾಖೆ.
4. ನಿರ್ದೇಶಕರು, ಪಂಚಾಯತ್ ರಾಜ್-2.
5. ನಿರ್ದೇಶಕರು, ಗ್ರಾಮ ವಿಕಾಸ.
6. ಮುಖ್ಯ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ.
7. ಮುಖ್ಯ ಇಂಜಿನೀಯರ್, ಪಂ.ರಾಜ್ ಇಂ.ಇಲಾಖೆ, ಬೆಂಗಳೂರು.

8. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ.
9. ಜಂಟಿ ನಿರ್ದೇಶಕರು, ರಸ್ತೆ ಮತ್ತು ಸೇತುವೆ.

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.